ಚಿತ್ರಿಸಿದ್ದ ಚಿತ್ರಗಳನ್ನು ಗೋಡೆಗಳಿಗೆ ಅಂಟಿಸಿದ್ದರು. ಸ್ವತಂತ್ರವಾಗಿ ಹೋಗಿ ತಿನ್ನಲು ತಿಂಡಿ ಸಹ ಕೊಳ್ಳುವುದು ಸಾಧ್ಯವಿರಲಿಲ್ಲ. ಹೇಗೋ ಯಹೂದಿಗಳ ನೆರವಿಗಿದ್ದ ಯುಜಿಐಎಫ್ ಎನ್ನುವ ಸಂಸ್ಥೆಯ ನೆರವಿನಿಂದ ಉಳಿದುಕೊಳ್ಳಲು ನೆಲೆ ಸಿಕ್ಕಿತು. ಆದರೆ ಆ ಸಂಸ್ಥೆ ಸಹ ನಾಝಿಗಳ ಹಿಡಿತದಲ್ಲಿತ್ತು. ಹೀಗಾಗಿ ತೂಗು ಕತ್ತಿಯ ಕೆಳಗೆ ಬದುಕು ಸಾಗಬೇಕಿತ್ತು. ಮತ್ತೊಮ್ಮೆ ಬಂಧನ, ಬಿಡುಗಡೆಯ ಪ್ರಹಸನ ನಡೆಯಿತು.

ಈ ಬಾರಿ ನನ್ನ ತಂದೆ ನಮ್ಮೆಲ್ಲರನ್ನೂ ಹೇಗಾದರೂ ರಷ್ಯಾಕ್ಕೆ ಸಾಗಿಸುವ ನಿರ್ಧಾರ ಮಾಡಿ ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಳ್ಳಲು ನಿರ್ಧರಿಸಿದರು. ಸದಾ ಕಾನೂನಿಗೆ ಬೆಲೆ ಕೊಡಬೇಕು ಎಂದು ಹೇಳುತ್ತಿದ್ದ ಅಪ್ಪನೇ ಬದುಕುಳಿಯಬೇಕೆಂದರೆ ನಕಲಿ ದಾಖಲೆ ಸೃಷ್ಟಿಸಿಕೊಳ್ಳಬೇಕು ಎನ್ನುವ ನಿರ್ಧಾರಕ್ಕೆ ಬಂದಿದ್ದರು. ಆ ದಾಖಲೆಗಳನ್ನು ತರಲು ನನ್ನನ್ನೇ ಕಳಿಸಿದರು.

ಆಗ ಭೇಟಿಯಾದ ವ್ಯಕ್ತಿ ಪೆಂಗ್ವಿನ್. ಆತ ನಮ್ಮ ಕುಟುಂಬದ ವಿವರಗಳನ್ನು ಕೇಳಿ ತಿಳಿದುಕೊಂಡ. ಒತ್ತಾಯಪೂರ್ವಕವಾಗಿ ಫ್ರೆಂಚ್ ಕಾರ್ಮಿಕರನ್ನು ಕೆಲಸ ಮಾಡಲು ಜರ್ಮನಿಗೆ ಕಳಿಸುವುದನ್ನು ತಪ್ಪಿಸಲು ನನ್ನ ಗುರುತಿನ ಚೀಟಿಯಲ್ಲಿ ವಿದ್ಯಾರ್ಥಿ ಎಂದು ನಮೂದಿಸುವುದಾಗಿ ಹೇಳಿದ. ನನಗದು ಇಷ್ಟವಿರಲಿಲ್ಲ. ಬದುಕಲು ಕೆಲಸದ ಅಗತ್ಯವಿತ್ತು. ಹಾಗಾಗಿ ನಾನು ಡೈಯರ್ ಆಗಿ ಕೆಲಸ ಮಾಡಿದ್ದೆ ಎಂದು ಹೇಳಿ ವೃತ್ತಿಯನ್ನು ನಮೂದಿಸಲು ಹೇಳಿದೆ. ಆತನಿಗೆ ನನ್ನ ಕೆಲಸದ ಬಗ್ಗೆ ಕುತೂಹಲ ಕೆರಳಿ, 'ನಿನಗೆ ಇಂಕಿನ ಕಲೆಗಳನ್ನು ಅಳಿಸಲು ಬರುತ್ತಾ?' ಎಂದ. 'ಅದರಲ್ಲಿ ನಾನು ನಿಪುಣ. ಕೆಮಿಸ್ಟ್ರಿ ಕೂಡ ಕಲಿತಿದ್ದೇನೆ' ಅಂತ ಹೇಳಿದೆ. 'ವಾಟರ್‌ಮನ್ ಬ್ಲೂ ಇಂಕ್ ಅಳಿಸಲು ಬರುತ್ತಾ?' ಅಂದ. 'ಬರುತ್ತೆ' ಅಂದೆ. ಬಹುನಿರೀಕ್ಷೆಯಿಂದ ಕಾಯುತ್ತಿದ್ದ ಬಂಡುಕೋರರ ಜೊತೆ ಜನರ ರಕ್ಷಣೆಗಾಗಿ ಕೆಲಸ ಮಾಡುವ ಅವಕಾಶ ಹೀಗೆ ನನಗೆ ಸಿಕ್ಕಿತು. ಹೀಗೆ ಒಬ್ಬ 'ಫೋರ್ಜರಿ' ಮಾಡುವವನಾಗಿ ನನ್ನ ಬದುಕಿನ ಹೊಸ ಅಧ್ಯಾಯ ಶುರುವಾಯಿತು.

ನಾನೆಂದೂ ಆಯುಧಗಳನ್ನು ಹಿಡಿದು ಹೋರಾಟ ಮಾಡಲು ಸಾಧ್ಯವಿರಲಿಲ್ಲ. ನನಗೆ ಹಿಂಸೆ ಸಾಧ್ಯವಿಲ್ಲ. ಕಲಾವಿದನಾಗಬೇಕೆಂದುಕೊಂಡಿದ್ದೆ ಆದರೆ ಮನೆಯವರು ಅದೆಲ್ಲ ಸಾಧ್ಯವಿಲ್ಲ ಅಂದಿದ್ದರು. ಬಹುಶಃ ಫೋರ್ಜರಿ ಮಾಡುವವನಾಗಿಲ್ಲದಿದ್ದರೆ ಒಬ್ಬ ಫೋಟೋಗ್ರಾಫರ್ ಅಥವಾ ಒಬ್ಬ ಕೆಮಿಸ್ಟ್ ಆಗಿರುತ್ತಿದ್ದೆ. ಈಗ ನನಗಿದ್ದ ಅದೇ ಕೆಮಿಸ್ಟ್ರಿಯ ತಿಳಿವಳಿಕೆಯಿಂದ ಬಂಡುಕೋರರ ಜೊತೆ ಕೆಲಸ ಮಾಡಲು ಹೊರಟಿದ್ದೆ. ನಿರಾಶ್ರಿತರ, ಹೋರಾಟಗಾರರ ನೆರವಿಗೆ ಅಗತ್ಯವಿದ್ದ ದಾಖಲೆಗಳನ್ನು ಸೃಷ್ಟಿಸಿಕೊಡುವ ಬ್ರಹ್ಮನಾಗಿದ್ದೆ. ಆದರೆ ಎಂದೂ ನಾನು ಮಾಡಿದ ಕೆಲಸಕ್ಕೆ ಪ್ರತಿಯಾಗಿ ಹಣ ಪಡೆಯಲಿಲ್ಲ. ಈ ಕೆಲಸಕ್ಕೆ ಹಣ ಪಡೆದರೆ ಅದು ನನ್ನ ನೈತಿಕತೆಯನ್ನೇ ಮಾರಿಕೊಂಡಂತೆ ಎನ್ನುವುದು ನನ್ನ ನಿಲುವಾಗಿತ್ತು.

ಸತತ ಮೂವತ್ತು ವರ್ಷಗಳ ಕಾಲ ಮಾಡಿದ ಈ ಕೆಲಸದಲ್ಲಿ ಹಲವು ಮರೆಯಲಾಗದ ವ್ಯಕ್ತಿಗಳು, ಅನುಭವಗಳು ಘಟನೆಗಳಿವೆ. ಬಂಡುಕೋರರ ಗುಂಪನ್ನು ಸೇರುತ್ತಿದ್ದ ಹಾಗೆ ಮೊದಲು ನಾನು ಮಾಡಿದ್ದು ಪ್ರಯೋಗಾಲಯವನ್ನು ಸೃಷ್ಟಿಸಿಕೊಂಡಿದ್ದು. ಸುಲಭವಾಗಿ ಸಿಗುತ್ತಿದ್ದ ವಸ್ತುಗಳಿಂದಲೇ ಅಗತ್ಯವಾದದ್ದನ್ನು ಮಾಡಿಕೊಳ್ಳುವುದು ನನ್ನ ಅಭ್ಯಾಸವಾಗಿತ್ತು. ಹಾಗಾಗಿ ಗುಜರಿಯಲ್ಲಿ ಬಿದ್ದ ಹಳೇ ಬೈಸಿಕಲ್ ಚಕ್ರ, ಇಸ್ತ್ರಿ ಪೆಟ್ಟಿಗೆ ಇತ್ಯಾದಿಗಳೆಲ್ಲವೂ ನನ್ನ ಕೈಯಲ್ಲಿ ಯಂತ್ರಗಳಾಗಿ ಮಾರ್ಪಾಡಾದವು. ನಕಲಿ ದಾಖಲೆಗಳನ್ನು ಸೃಷ್ಟಿಸಲು ಅಗತ್ಯವಿದ್ದ ವಿವಿಧ ರೀತಿಯ ಪೇಪರ್‌ಗಳನ್ನು ಮಾಡುವುದು, ದಾಖಲೆಗಳು ಹಳತರಂತೆ ಮಾಡುವ ವಿಧಾನಕ್ಕೊಂದು ಯಂತ್ರ, ಫೋಟೊ ಎನ್‌ಗ್ರೇವಿಂಗ್ ಎಲ್ಲವನ್ನೂ ಕಲಿಯುತ್ತಾ ಹೋದೆ. ಹಗಲು ರಾತ್ರಿ ಕೆಲಸ ಮಾಡಿದೆ.